ತಾರೀಖು 1ನೇ ಡಿಸಂಬರ್ 1888.

ನಂ. 156.—1870ನೇ ಇನವಿ Xನೇ ನಂಬರ್ ಲ್ಯಾಂಡ್ ಅಕ್ವಿಜಿಷನ್ ಆಕ್ಟಿನ 6ನೇ ಸೆಕ್ಷನ್ ನಿಯಮಗಳನುಸರಿಸಿ ಯಿದರಿಂದ ಪ್ರಕಟನವನ್ನು ಮಾಡುವದೇನಂದರೆ, ಇದರಡೀ ಕಂಡ ಪಟ್ಟಿಯಲ್ಲಿ ನಮೂದಾದ ಜಮೀನುಗಳು ಸರಕಾರ ಕೆಲಸಕ್ಕೆ ಅಂದರೆ ಬೆಂಗಳೂರು ಸಿವಿಲ್ ಮಿಲಿಟೇರಿ ಸ್ಟೇಷನಿನ ಹಿಂದೂ ಜನಗಳ ಸ್ಮಶಾನ ಭೂಮಿಗೋಸ್ಕರ ಬೇಕಾಗಿರುತ್ತೆ.

ಡಿಸ್ಟ್ರಿಕ್ಟು.	ತಾಲ್ಲೂಕು.	ಹಳುವಳ್ಳಿದಾರನ ಹೆಸರು.	ಜಮೀನಿನ ತಪಶೀಲು. ನಂಬರ.	ಬೇಕಾಗಿರುವ ವಿಸ್ತೀರ್ಣ. ಎ.	ಗುಂ.	ಕಂದಾಯ. ರೂ. ಆ. ಪೈ.	ಚಕ್ಕುಬಂದಿ.	ಪರಾ.
ಬೆಂಗಳೂರು.	ಬೆಂಗಳೂರು.	ತೋಟದ ವೀರಣ್ಣ	ಖುಷ್ಕಿ	4	5	..	ಉತ್ತರಕ್ಕೆ ಯರ್ರಪ್ಪನ ಖುಷ್ಕಿ ಜಮೀನು, ದಕ್ಷಿಣಕ್ಕೆ ಷೇರಸಾಬರ ಮತ್ತು ರಾಮಸ್ವಾಮಿಯ ಖುಷ್ಕಿ ಭೂಮಿ, ಪೂರ್ವಕ್ಕೆ ಲಿಂಗರಾಜಪುರದ ಗಡಿ, ಪಶ್ಚಿಮಕ್ಕೆ ದೊಡ್ಡನಾಗಯ್ಯನ ಖುಷ್ಕಿ ಜಮೀನು.	
	ಕಾಡುಗೊಂಡನಹಳ್ಳಿ	ದೊಡ್ಡಮುನಿಯಪ್ಪನ ಯರ್ರ	ಡಿಟೋ	2	13	..	ಉತ್ತರಕ್ಕೆ ಯರ್ರಪ್ಪನ ಭೂಮಿ, ದಕ್ಷಿಣಕ್ಕೆ ತೋಟದ ವೀರಣ್ಣನ ಭೂಮಿ, ಪೂರ್ವಕ್ಕೆ ಲಿಂಗರಾಜಪುರದ ಗಡಿ, ಪಶ್ಚಿಮಕ್ಕೆ ಕೃಷ್ಣನ ಭೂಮಿ.	
		ದೊಡ್ಡನಾಗಯ್ಯ	ಡಿಟೋ	4	33	..	ಉತ್ತರಕ್ಕೆ ಯರ್ರಪ್ಪನ ಭೂಮಿ, ದಕ್ಷಿಣಕೆ ರಾಮಸ್ವಾಮಿ ಮತ್ತು ಷೇರಸಾಬರ ಭೂಮಿ, ಪೂರ್ವಕ್ಕೆ ಯರ್ರಂಣನ ಭೂಮಿ, ಪಶ್ಚಿಮಕ್ಕೆ ಕೃಷ್ಣನ ಭೂಮಿ.	
		ವೀರಬಾಗಲ್ ಕೃಷ್ಣದಾಸಿ	ಡಿಟೋ	5	3	...	ಉತ್ತರಕ್ಕೆ ದಾಸಪ್ಪನ ಭೂಮಿ, ದಕ್ಷಿಣಕ್ಕೆ ಷೇರಸಾಬಿ ಭೂಮಿ, ಪೂರ್ವಕ್ಕೆ ದೊಡ್ಡನಾಗಯ್ಯನ ಭೂಮಿ, ಪಶ್ಚಿಮಕ್ಕೆ ಅರಳಪ್ಪನ ಭೂಮಿ	
		ಮುತ್ತಪ್ಪಗೋಸ್ಕರ ಅರಳಯ್ಯ	ಡಿಟೋ	2	21	..	ಉತ್ತರಕ್ಕೆ ದಾಸಪ್ಪನ ಭೂಮಿ, ದಕ್ಷಿಣಕ್ಕೆ ಗಾವರಾಯಪ್ಪನ ಭೂಮಿ, ಪೂರ್ವಕ್ಕೆ ಕೃಷ್ಣನ ಭೂಮಿ, ಪಶ್ಚಿಮಕ್ಕೆ ತೋಟದ ನಂಜಯ್ಯನ ಭೂಮಿ.	
		ತೋಟದ ನಂಜಯ್ಯ	ಡಿಟೋ	6	24	..	ಉತ್ತರಕ್ಕೆ ರಂಗಪ್ಪನ ಭೂಮಿ, ದಕ್ಷಿಣಕ್ಕೆ ರಾಯಪ್ಪ ಮತ್ತು ನಂಜಯ್ಯನ ಜಮೀನು, ಪೂರ್ವಕ್ಕೆ ಅರಳಯ್ಯನ ಭೂಮಿ, ಪಶ್ಚಿಮಕ್ಕೆ ದ್ಯಾವರಾಜೆಬಾನಹಳ್ಳಿ ಗಡಿ ಮತ್ತು ದಾನಪ್ಪನ ಜಮೀನು.	

ತಾರೀಖು 22ನೇ ನವಂಬರ್ 1888.

ಕ್ಯಾಂಪ್ ನಂ. 1808.—1870ನೇ ಇನವಿ Xನೇ ನಂಬರ್ ಆಕ್ಟಿನ 6ನೇ ಸೆಕ್ಷನ್ ನಿಯಮಗಳನುಸರಿಸಿ ಇದರಿಂದ ಪ್ರಕಟಿಸುವದೇನಂದರೆ, ಇದಕ್ಕೆ ಲಗ್ಗತ್ತಾಗಿರುವ ಪೆಡ್ಯೂಲಿನಲ್ಲಿ ಕಂಡ ಜಮೀನುಗಳು ಸರ್ಕಾರ ಕೆಲಸಕ್ಕೆ ಅಂದರೆ ಮದರಾಸು ರೈಲ್ವೇ ಲೈನಿನಲ್ಲಿರತಕ್ಕ ಕೋಲಾರ ರೋಡಿನ ರೈಲ್ವೇ ಸ್ಟೇಷನ್ ಕೆಲಸಗಳಿಗೋಸ್ಕರ ಬೇಕಾಗಿರುತ್ತೆ.—

ಡಿಸ್ಟ್ರಿಕ್ಟು.	ತಾಲ್ಲೂಕು.	ಹೋಬ್ಳಿ.	ಗ್ರಾಮ.	ಜಮೀನಿನ ವಿವರ.	ಸರ್ಕಾರ ಕೆಲಸಕ್ಕೆ ತೆಗದುಕೊಳ್ಳಲ್ಪಡುವ ವಿಸ್ತೀರ್ಣ ಯಿ.	ಗುಂಟ.	ಗ.	ಇನಾಂದಾರರು ಸ್ವಂತಗಾಗಿ ಪ್ರಕಾರ ಆಗುವ ಪೇರೀಜು.	ದಾವಾಷಾಯಿ ರೂ.	ಆ.	ಪೈ.	ಪರಾ.
ಕೋಲಾರ.	ಬಿನಾಂಗನೆಟ್ಟಿ	ಬಿನಾಂಗನೆಟ್ಟಿ	ಹಿಟೋ	ನಂ. 77	0	23	17	ಹಾಜಿ ಯಿಸ್. ಮಾಇಲ್‌ಸೇಟ್.	2	5	3	ನಂ. 67ನೇ ಜಮೀನಿನಲ್ಲಿ ಹಾಜಿ ಯಿಸ್‌ಮಾಯಿಲ್ ಸೇಟನು ಒಗರು ಹುಕ್ಕುಂ ಒಂದು ಹಂಚಿನಮನೆ ಕಟ್ಟಿರುತ್ತಾನೆ.
				,, 76	0	33	7		2	9	7	
				67ನೇ ನಂಬ ೫ ಪೈಕಿ	1	16	24		2	9	1	
				327ನೇ ನಂಬ ೫ ಪೈಕಿ	0	20	48	ಯಸ್. ವೆಂಕಟ್ರಾಮಪ್ಪ	2	14	1	

ತಾರೀಖು 3ನೇ ಡಿಕಂಬರ್ 1888.

ನಂ. 157.—ಇದರದೆಕೆಯಿಂದ ಪ್ರಕಟಿಸಲ್ಪಡುವದೇನಂದರೆ, ತುಮಕೂರಿನಲ್ಲಿ ಬಂದು ನಾಟಾ ಬಿಕರಿ ಡಿಪೊ ಯನ್ನೇ ಕೋಠಿಯು ಆಜಮಾಯಿಷಿ ತರೀಕು ಮುರಳಿ ಸ್ಥಾಪಿಸಲ್ಪಟ್ಟಿರುತ್ತೆ. ತುಮಕೂರು ಡಿಸ್ಟ್ರಿಕ್ಟಿನ ಘಾರೆಸ್ಟುಗಳಲ್ಲಾಗಲಿ ಕೋಠಿಗಳಲ್ಲಾಗಲಿ ವಿಕ್ರಯಿಸಲ್ಪಡುವ ನಾನಾ ಜಾತಿ ಮರಗಳಿಗಾಗಿ ಯಿದರಿಂದ ಕಂಡ ಕಮ್ಮಿದರಗಳು ಮತ್ತೊಂದು ಹುಕ್ಕುಂ ಕೊಡುವ ಪರಿಯಂತ ವಸೂಲ್ಮಾಡಲ್ಪಡುವವು.

ಗಟ್ಟಿದಮಾದ, ತೇಗದಕೂಚಗಳು.			ಕೋಠಿಯಲ್ಲಿ.	
1 ಸಲೆ ಅಡಿಗೆ	..	..	0 4 0	ಘಾರೆಸ್ಟುಗಳಲ್ಲಿ, ದರ ಘಂಡಿ ಜೋಡಿಗೆ ಲೈಸೆನ್ಸು ಫೀ ಪಾವತಿ ಮಾಡಲ್ಪಡಬೇಕು.
1 ಸಲೆ ಅಡಿ ಲಾಗಾಯತು	2 ಸಲೆ ಅಡಿವರಿಗೆ	..	0 8 0	
2 ಡಿಟೋ	3 ಡಿಟೋ	..	0 12 0	
3 ಡಿಟೊ	4 ಡಿಟೋ	..	1 0 0	
4 ಡಿಟೋ	5 ಡಿಟೋ	..	1 4 0	
5 ಡಿಟೋ	6 ಡಿಟೋ	..	1 8 0	

ಮನ್ನಾಜಾತಿ ನಾಟಾಗಳು.	..	ಸಲೆ ಅಡಿ 1ಕ್ಕೆ		
ಹೊನ್ನೆ	..	0 8 0	..	8 0 0
ಬೀಟೆ	..	0 7 0	..	0 7 0
ಜಾಲಾರಿ	..	0 6 0	...	6 0 0
ಕಾರಾಟಿ	..			
ಮನ್ನಾಜಾತಿ ಅಲ್ಲದ ಮರಗಳು	..			
ಹುಲವೆ	..			
ಚನ್ನಂಗಿ	..	0 4 0	..	4 0 0
ಬಿಲ್ವಾರಾ	..			
ಬಾಗಿ	..			
ನೌಡಾಡಿ	..			
ಬಿಲಟೆ	..			
ದಿಂಡಗ	..	0 4 0	..	4 0 0
ಈಜಿ	..			
ಮೂಕರತಿ	..			
ಕೊರಮತ್ತಿ	..			
ಹರಲೆ	..			
ಬಿದರು ದರ 100ಕ್ಕೆ	..	1 10 0	..	1 4 0

ತಾರೀಖು 21ನೇ ಡಿಕಂಬರ್ 1888.

ಕಾರ್ಯಾರ್ಥ ದೀವಾನರವರನ್ನು ಭೇಟಿ ಮಾಡುವದಕ್ಕೆ ಅಪೇಕ್ಷಿಸುವ ದೊಡ್ಡಮನುಷ್ಯರು ಶುಕ್ರವಾರಗಳಲ್ಲಿ ಮಧ್ಯಾನ್ಹಾತ್ವರ 2 ಘಂಟೆಗೆ ಕಛೇರಿಗೆ ಬರತಕ್ಕದ್ದು. ಈ ಬಗ್ಯಾಗಿ ಹಿಂದಿನ ದಿನ ಚೀಫ್ ಸೆಕ್ರಿಟೆರಿಯವರಿಗೆ ತಮ್ಮ ಕಾರ್ಡ್‌ಗಳನ್ನು ಕಳುಹಿಸತಕ್ಕದ್ದು.

2. ಬೆಂಗಳೂರು ಆಫೀಸಿನಲ್ಲಿ ಯಿಡಲ್ಪಟ್ಟಿರುವ ಅರ್ಜಿಪೆಟ್ಟಿಗೆಯು ದಿನವಹಿ ಚೀಫ್ ಸೆಕ್ರಿಟೆರಿಯವರಿಂದ ಆವರು ಬೆಂಗಳೂರಲ್ಲಿ ಯಿಲ್ಲದ ಕಾಲದಲ್ಲಿ ಅಂಡರ್ ಸೆಕ್ರಿಟೆರಿಯವರಿಂದಲು ಮಧ್ಯಾನ್ಹ 12 ಘಂಟೆಗೆ ತೆಗಿಯಲ್ಪಟ್ಟು ಆದರಲ್ಲಿನ ಅರ್ಜಿಗಳು ತೆಗೆದುಕೊಳ್ಳಲ್ಪಡುವದು;

3, ಅರ್ಜಿದಾರರುಗಳು ಶುಕ್ರವಾರ ದಿವಸ ಮಧ್ಯಾನ್ಹಾತ್ವರ 3 ಘಂಟೆಗೆ ಕಛೇರಿಯಲ್ಲಿ ಕೇಳಲ್ಪಡುವರು.

ಬಿಸೋಜೀವ್ ಹುಕ್ಕುಂ.
ಆರ್. ವಿಜಯೀಂದ್ರರಾವ್,
ಚೀಫ್ ಸೆಕ್ರಿಟೆರಿ.

ದೀವಾನರವರು, ಅವರ ಭೇಟಿಮಾಡಲಿಚ್ಛೆಯುಳ್ಳ ದೊಡ್ಡಮನುಷ್ಯರುಗಳನ್ನು ಪ್ರತಿ ಶನಿವಾರ ದಿವಸ ಮಧ್ಯಾನ್ಹ 12 ಘಂಟೆ ಲಗಾಯತು 2 ಘಂಟೆ ಪರಿಯಂತ ತಮ್ಮ ವಾಸಸ್ಥಾನದಲ್ಲಿ ಬರಮಾಡಿಕೊಳ್ಳುವರು.

ನೇಟಿವ್ ದೊಡ್ಡಮನುಷ್ಯರುಗಳು ಅವರಿಗೆ ಯಿಷ್ಟವಿರುವ ಪಕ್ಷಕ್ಕೆ ಅದೇ ದಿವಸ ಮಧ್ಯಾನ್ಹಾತ್ವರ 3 ಘಂಟೆಗೆ ಬರಬಹುದು.

ಹುಕ್ಕುಂ ಬಿಸೋಜೀವ್,
ಕೆ. ದೊರಸಾಮಿಅಯ್ಯರ್,
ಪ್ರೈವೇಟ್ ಸೆಕ್ರಿಟೇರಿ.

ಚಕ್ರವರ್ತಿನಿಯ ಸರ್ಕಾರದ ನೌಕರಿಗೋಸ್ಕರವಾದ ಮಿಲಿಟೇರಿ ಫೌಜು.—ಯುದ್ಧಸಂದರ್ಭದಲ್ಲಿ ಚಕ್ರವರ್ತಿನಿಯವರ ತರಬೇತಾದ ಸೈನ್ಯದೊಂದಿಗೆ ನೌಕರಿ ಬಗ್ಗೆ ಇಂಡಿಯಾ ದೇಶದ ಅನೇಕ ರಾಜರುಗಳು ತಮ್ಮ ಫೌಜನ್ನು ಕ್ರಮಪಡಿಸಿ ಅದನ್ನು ಅಭಿವೃದ್ಧಿಯಲ್ಲಿ ತಂದು ಅಪೇಕ್ಷಿತವಾದ ಕಾಲದಲ್ಲಿ ಚಕ್ರವರ್ತಿನೀ ಸರಕಾರದವರ ಅಧೀನ ಪಡಿಸುವದಾಗಿ ಇಂಡಿಯಾ ಗವರ್ನಮೆಂಟಿಗೆ ತಿಳಿಯಪಡಿಸಿದಂತೆ ನಮ್ಮ ಶ್ರೀಮನ್ಮಹಾರಾಜರವರು ಸಹ ತಿಳಿಯಪಡಿಸಿದರೆಂಬುವದು ನಿಮ್ಮಗ ಗೊತ್ತಿರಬಹುದು. ಯಾವ ಅನುಭವನೆಯಿಂದ ರಾಜರುಗಳ ಅಪೇಕ್ಷೆಯು ವ್ಯಕ್ತ ಪಡಿಸಲ್ಪಟ್ಟಿತೋ ತತ್ಸದೃಶವಾದ ಅಂತಃಕರುಣದಿಂದ ಇದು ಆದರಿಸಲ್ಪಟ್ಟಿತು. ತದನಂತರ ನೇಟಿವ್ ಫೌಜುಗಳನ್ನ ಕ್ರಮಪಡಿಸಿ ತರಬೇತಿಮಾಡುವ ಕೆಲಸವು ಕೂಡ್ಲೆ ಉಪಕ್ರಮವಾಯಿತು. ಈ ಕೆಲಸಕ್ಕೋಸ್ಕರ ಮೇಜರ್ ಮೆಲ್ಲಿಸ್ ಸಾಹೇಬರವರು ನೇಮಕವಾದರು. ಈ ವಿಭಾಗದ ಕಾಶ್ಮೀರ, ಪಂಜಾಬ್, ಮತ್ತು ರಾಜಪ್ರತಾನ ಸಂ ಸ್ಥಾನಗಳಲ್ಲಿ ಈಗಾಗಲೇ ನೆರವೇರಿರುತ್ತೆ. ವಾಯವ್ಯಸಿಕ್ಕಿನ ಸರಹದ್ದಿಗೆ ದೂರದಲ್ಲಿರುವ ರಾಜ್ಯಗಳಲ್ಲಿ ಇದೇ ರೀತಿ ಕ್ರಮನಡೆಸಲು ಆರಂಭವಾಗಿರುತ್ತೆ. ಈ ಮುಖ್ಯವಾದ ಕೆಲಸಕ್ಕೋಸ್ಕರ ಸದರಿ ಮೇಜರ್ ಮೆಲ್ಲಿಸ್ ಸಾಹೇಬರವರು ಇಲ್ಲಿಗೆ ಕ್ಷಿಪ್ರದಲ್ಲಿ ಬರುವರಾಗಿದ್ದಾರೆ. ಅನೇಕ ಕಾರಣಗಳಿಂದ ಆಗಾಗ್ಗೆ ಮೈಸೂರು ಫೌಜು ಬಹಳವಾಗಿ ಕಮ್ಮಿಯಾಗುತ್ತಾ ಬಂದದ್ದರಿಂದ ಈಗ ಇರತಕ್ಕ ಸೈನ್ಯವನ್ನ ಕಾಯಮಪಡಿಸುವದು ಮಾತ್ರವೇ ಅಲ್ಲದೆ ಹೊಸದಾಗಿ ಯೋಗ್ಯವಾದ ಫೌಜನ್ನ ಜಮಾಯಿಸಿ ತರಬೇತ ಮಾಡಬೇಕೆಂಬುವದು ಶ್ರೀಮನ್ಮಹಾರಾಜರವರ ಅಭಿಪ್ರಾಯವಾಗಿರುತ್ತೆ. ಈ ಶೀಮೆಯಲ್ಲಿ ಸಾಮರ್ಥ್ಯವುಳ್ಳ ಸೈನ್ಯವನ್ನ ಹೆಪ್ಪರದಲ್ಲಿ ಜೊತಗೊಳಿಸಲು ಸೌಲಭ್ಯವುಂಟು. ಮೈದಾನ ಶೀಮೆಯಪರಿಗಿಂತಲೂ ಮೈಸೂರು ದೇಶಸ್ಥರ ವೇಡಬಾಣ್ಯಾಪು ಉತ್ತಮವಾಗಿದ್ದು. ಮತ್ತು ಇವರು ದೂರದೇಶಗಳಲ್ಲಿಯೂ ಅನಾರೋಗ್ಯವಾದ ಸ್ಥಳಗಳಲ್ಲಿಯೂ ವಿಶೇಷ ಸೈರಣೆಯಿಂದ ಕಷ್ಟವನ್ನು ಸಹಿಸುವರಾಗಿ ಪ್ರಖ್ಯಾತರಾಗಿರುತ್ತಾರೆ. ಪರಾಕ್ರಮಿಗಳೆಂದೆನಿಸಿಕೊಂಡ ಬೇಡರ ಶಿಪಾಯಿಗಳು ಮತ್ತು ಮೈಸೂರು ಸವಾರರು ಈ ದೇಶದಲ್ಲಿ ಹುಟ್ಟಿದ ಯುದ್ಧಶಾಲಿಗಳಾದ ಜನಗಳಲ್ಲಿ ಚುನಾಯಿಸಲ್ಪಟ್ಟವರಾಗಿದ್ದರು. ಪೂರ್ವದಂತೆಯೇ ಯಾಗಲೂ ನವೀನವಾಗಿ ಜಮಾಯಿಸಬೇಕಾದ ಸೈನ್ಯಕ್ಕೆ ಇವರ ಜಾತೀಯರಲ್ಲಿ ಶಕ್ತರಾದ ಜನರು ಸಿಕ್ಕುತ್ತಾರೆ. ಉತ್ತಮವಾದ ಕುದರೇ ಫೌಜನ್ನು ಇಡಲು ಈ ದೇಶದ ಹವ ಇತರ ಶೀಮೆಗಳಿಗಿಂತಲೂ ಶ್ರೇಷ್ಠವಾದ್ದಾಗಿದೆ. ಮತ್ತು ಪ್ರಸಿದ್ಧವಾದ ಅಮೃತಮಹಲ್ ಕುದುರೆಗಳ ಸಹಾಯದಿಂದ ಸರಂಜಾಮುಗಳನ್ನು ಸಾಗಿಸುವದಕ್ಕೆ ವಿಶೇಷ ಸೌಲಭ್ಯವುಳ್ಳವರಾಗಿರುತ್ತೇವೆ. ಇದನ್ನೆಲ್ಲ ಪರ್ಯಾಲೋಚಿಸಿ ಮೈಸೂರು ಸಂಸ್ಥಾನದ ಪುರಾತನ ವಿದ್ಯಾಭಿಮಾನ ಸ್ವಭಾವೆಯಿಂದ ಶ್ರೀಮನ್ಮಹಾರಾಜರವರು ಸಂಸ್ಥಾನದ ಯಾವಶೈನ್ಯ ಸಾಹಿತ್ಯಗಳನ್ನೂ ಚಕ್ರವರ್ತಿನೀಯವರ ಅಭಿಮಾನಪಡಿಸಲು ಪ್ರೇರಿತರಾದರು. ಶ್ರೀಮನ್ಮಹಾರಾಜರವರು ತಮ್ಮ ಸಂಸ್ಥಾನದ ಉನ್ನತಪದವಿಗೂ ಮತ್ತು ಚಕ್ರವರ್ತಿನೀಯವರ ಸರಕಾರದ ಉದ್ದಿಶ್ಯವಾದ ತಮ್ಮ ಸ್ವಂತ ಕರ್ತವ್ಯಗಳಿಗೂ ಅನುಗುಣವಾಗಿ ಇಂಡಿಯಾ ರಾಷ್ಟ್ರ ಸಂರಕ್ಷಣೆಯಲ್ಲಿ ತಮ್ಮ ಸೈನ್ಯವು ಸೇರಲು ಸಾಮರ್ಥ್ಯವುಳ್ಳದ್ದಾಗಿಯೆಂದು ತಿಳಿದು ತೃಪ್ತಿಯನ್ನು ಹೊಂದುವ ಕಾಲವನ್ನು ಅತ್ಯಾತುರದಿಂದ ಎದುರುನೋಡುತ್ತಾರೆ.

ಬರುವ ನವಂಬರ್ ತಿಂಗಳಲ್ಲಿ ಇಂಡಿಯಾದೇಶವನ್ನು ಸಂಚರಿಸುವ ಶ್ರೀಮಚ್ಚಕ್ರವರ್ತಿನಿಯವರ ಪಾತ್ರರಾದ ಪ್ರಿನ್ಸ್ ರಾಯಲ್ ಪ್ಯಾನೆಸ್ ಪ್ರಿನ್ಸ್ ಅಲ್ಬರ್ಟ್ ವಿಕ್ಟರಿಯವರನ್ನು ಮೈಸೂರಿಗೆ ದಯಮಾಡುವಂತೆ ಕೇಳಿಕೊಂಡಿರಲಾಗಿ ಅವರು ಒಪ್ಪಿರುತ್ತಾರೆಂದು ನಿಮಗೆ ತಿಳಿಸುವದಕ್ಕೆ ಸಂತೋಷವುಳ್ಳವರಾಗಿದ್ದೇವೆ. ಈ ರಾಜ ಕುಮಾರರನ್ನು ಅವರ ಮುಮ್ಮೋಸ್ತಿತ ಪದವಿಗೆ ತಕ್ಕ ಉಚಿತ ಮರ್ಯಾದೆಯೊಡನೆ ಬರಮಾಡಿಕೊಳ್ಳಲು ಜೇಕಾದ ವಿಭಾಗು ದರಿಬಾರಿನವರಿಂದ ಮಾಡಲ್ಪಡುತ್ತೆ. ಶ್ರೀಮನ್ಮಹಾರಾಜ್ಞೆಯವರು ದಯಪುರಸ್ಸರವಾಗಿ ಈ ರಾಜಕುಮಾರರಿಗೆ ಇಂಡಿಯಾದೇಶ ಸಂಚಾರಕ್ಕೆ ಅಪ್ಪಣೆ ಕೊಟ್ಟದ್ದು ಅವರಿಗೆ ಇನ್ನಿಲ್ಲದ ಕೀರ್ತಿ ಪ್ರತಿಷ್ಠೆಗಳಲ್ಲಿರತಕ್ಕ ವಿಶ್ವಾಸಕ್ಕೆ ಪುನಃ ದೃಷ್ಟಾಂತವಾಗಿ ನಾವು ತಿಳಿಯುತ್ತೇವೆ. ಮೈಸೂರು ಸಂಸ್ಥಾನದ ವಿಷಯದಲ್ಲಿ ಶ್ರೀಮನ್ಮಹಾರಾಜ್ಞೆಯವರೂ ಮತ್ತು ಅವರ ಸರ್ಕಾರದವರೂ ಸಹ ಸಾರ್ವದಾ ವಿಶೇಷ ದಯೆಯುಳ್ಳವರಾಗಿರುತ್ತಾರೆ. ಕೀರ್ತಿಹೊಂದಿದ ಈ ರಾಜಕುಮಾರರ ನಿರೀಕ್ಷಿತವಾಗಿರುವ ಆಗಮನದಿಂದ ಮೈಸೂರು ಸಂಸ್ಥಾನದ ಕ್ಷೇಮಕ್ಕೆ ಸಂಬಂಧಪಟ್ಟ ಎಲ್ಲಾ ವಿಷಯಗಳಲ್ಲಿಯೂ ಕೃಪಾಳುಗಳಾದ ಶ್ರೀಮನ್ಮಹಾರಾಜ್ಞೆಯವರ ಉತ್ಸಾಹವು ಇತೋಭ್ಯಧಿಕವಾಗಿ ಬೆಳೆಯಬಹುದೆಂದು ಶ್ರೀಮನ್ಮಹಾರಾಜರವರು ತಿಳಿದು ಇದ್ದಾರೆ.

ಮೈಸೂರು, ೨ನೇ ಅಕ್ಟೋಬರ್ ಸ್ ೧೮೮೯.

ಕೆ. ಶೇಷಾದ್ರಿ ಐಯ್ಯರ್,
ಮೈಸೂರು ಸಂಸ್ಥಾನದ ದಿವಾನರು.

Mysore Govt. Central Press, Bangalore.—1889.

ಈಚಿಗೆ ಜನಗಳು ಸ್ವಂತವಾಗಿ ಸ್ಥಾಪಿಸಿಕೊಂಡ ಅನೇಕ ಪಾಠಶಾಲೆಗಳಿಗೆ ಸಹಾಯ ದ್ರವ್ಯವನ್ನು ಕೊಟ್ಟಿ ಯಿದೆ. ಇವುಗಳಲ್ಲಿ ಅನೇಕ ಸಂಸ್ಕೃತ ಪಾಠಶಾಲೆಗಳೂ ಸೇರಿವೆ. ದೇಶಭಾಷೆಯೊಂದಿಗೆ ಸಂಸ್ಕೃತ ವಿದ್ಯಾ ವ್ಯಾ ಸಂಗವನ್ನು ವೃದ್ಧಿ ಪಡಿಸೋಣವರಿಂದ ಸಾಮಾನ್ಯವಾಗಿ ದೇಶದಲ್ಲಿನ ವಿದ್ಯೆಯ ಸ್ಥಿತಿಯನ್ನೇ ಅಭಿವೃದ್ಧಿಪಡಿಸಿದ ಹಾಗೆ ಆಗುತ್ತೆ. ಮೈಸೂರು ಸಂಸ್ಕೃತ ಕಾಲೇಜಿನಲ್ಲಿ ಇರಮನೇ ಪಂಡಿತರಿಂದ ಪ್ರತಿ ಸಂವತ್ಸರದಲ್ಲಿಯೂ ನಡಿಸ್ಪ ಡುವ ಪರೀಕ್ಷೆಯಿಂದ ಈಗ ದೇಶದಲ್ಲಿ ಎಲ್ಲಾಕಡೆಯಲ್ಲೂ ಇರಹಕ್ಕ ಅನೇಕ ಸಂಸ್ಕೃತ ಪಾಠಶಾಲೆಗಳ ಯೋಗ್ಯತೆಯೂ ಚನ್ನಾಗಿ ಗೊತ್ತುಮಾಡಬಹುದಾಗಿ ಇದೆ.

ಸ್ತ್ರೀಯರುಗಳ ವಿದ್ಯಾಭ್ಯಾಸವು ನಾನಾ ಮುಖವಾಗಿ ವೃದ್ಧಿಯಾಗುತ್ತಾ ಇದೆ. ಸ್ತ್ರೀಯರಿಗೆ ವಿದ್ಯೆಯನ್ನು ಕಲಿಸುವದು ಈಚಿಗೆ ಸರ್ವಜನ ಸಮ್ಮತವಾಗುತ್ತಾ ಬಂದು ಇದೆ. ಮೈಸೂರಲ್ಲಿರುವ ಶ್ರೀಮನ್ಮಹಾರಾಜ್ಞೀಯ ವರ ಬಾಲಿಕಾಪಾಠಶಾಲೆಯನ್ನು ನೋಡಿ ಇದರಂತೆ ಸ್ಥಾಪಿಸಲ್ಪಟ್ಟ ಹೊಸದಾದ ಅನೇಕ ಪಾಠಶಾಲೆಗಳು ಉತ್ತಮ ಸ್ಥಿತಿಯಲ್ಲಿರುತ್ತವೆ. ಸ್ವಲ್ಪಕಾಲಮುಂಚೆ ಇಂಗ್ಲಾಂಡಿನಿಂದ ಈ ಪಾಠಶಾಲೆಯ ಮೇಲ್ವಿಚಾರಣೆಗಾಗಿ ನೇಮಿಸಲ್ಪಟ್ಟ ಒಬ್ಬ ಥೊರಸಾನಿಯರು ಬಂದು ಇರುತ್ತಾರೆ. ಈ ಏರ್ಪಾಡಿನಿಂದ ಬಹಳ ಪ್ರಯೋಜನ ಉಂಟಾಗಬಹುದು.

ಪ್ರಾಚೀನ ಲಿಪ್ಯನ್ವೇಷಣ.—ವಂಭತ್ತು ತಾಲ್ಲೂಕುಗಳಲ್ಲಿಯೂ ಬಂದು ಸಬ್ ತಾಲ್ಲೂಕಿನಲ್ಲಿಯೂ ಪುರಾತನ ಶಾಸನಗಳ ಶೋಧನೆಯು ಪೂರೈಸಿತು. ಸಿಕ್ಕಿದ ಕೆಲವು ಶಾಸನಗಳು ಬಹಳ ಪುರಾತನವಾದದ್ದು, ಅವುಗಳಲ್ಲಿ ಕದಂಬರಾಷ್ಟ್ರಕೂಟ ಗಾಂಗ ಈ ರಾಜರುಗಳಿಗೆ ಸಂಬಂಧಿಸಿದ್ದು ಬಹಳ ಮುಖ್ಯವಾದವು.

ಕನ್ನಡಭಾಷೆ ಮತ್ತು ಕನ್ನಡ ಗ್ರಂಥಗಳ ಚರಿತ್ರೆಗೆ ಅತ್ಯಂತ ಉಪಯುಕ್ತವಾದ ಕೆಲವು ಒರನ ಗ್ರಂಥ ಗಳನ್ನೂ ಸಂಪಾದಿಸಿ ಇದೆ. ಇವುಗಳಿಂದ ಈಗ್ಗೆ ಬಂದು ಸಹಸ್ರ ಸಂವತ್ಸರಗಳ ಕೆಳಗೆ ಮುಖ್ಯವಾಗಿ ದಕ್ಷಿಣ ಮಹರಾಷ್ಟ್ರವೆಂತ ವಾಡಿಕೆಯಲ್ಲಿ ತಿಳಿದಿರುವ (ಆದರೆ ಸರ್ಕಾರೀ ರಿಕಾರ್ಡಿನಲ್ಲಿ ಕರ್ನಾಟಕ ಪ್ರಾಂತ್ಯವೆನ್ನ ಲ್ಪಡುವ) ದೇಶದಲ್ಲಿ ಕನ್ನಡಭಾಷೆಯು ಉನ್ನತ ಸ್ಥಿತಿಯಲ್ಲಿ ಇದ್ದಂತೆ ತಿಳಿಯಬರುತ್ತೆ. ಈಚಿಗೆ ಆಗಿರುವ ರೈಲ್ವೆ ದು ಈ ಶೀಮೆಯಿಂದ ಮೈಸೂರು ಶೀಮೆಗೆ ಸಂಚಾರಕ್ಕೆ ಸೌಕರ್ಯ ಪ್ರಾಪ್ತವುಮಾಡಿದೆ.

ಅಂಚೆ.—ಮೈಸೂರು ಅಂಚೇ ಇಲಾಖೆಯನ್ನು ಇಂಪೀರಿಯಲ್ ಅಂದರೆ ಹರಿಮ್ಯಾಜಸ್ಟಿನ ಪೋಸ್ಟ್ ಇಲಾಖೆಗೆ ಸ್ರ1889ನೇ ಏಪ್ರಿಲ್ ಗುತ್ರೀ ಶಾರೀಬಿನಲ್ಲಿ ವರ್ಗಮಾಡಿದ್ದಾಯಿತು. ಇದರಿಂದ ಸಂಸ್ಥಾನಕ್ಕೆ ಸಾಳಿಯಾನಾ 60,000 ರೂಪಾಯಿವರಿಗೂ ನಿವ್ವಳ ಘಾಯಿಲೆಯಾಗಿದೆ. ಆದರೆ ಹೀಗೆ ಈ ಇಲಾಖೆಯನ್ನು ಕೊಟ್ಟು ಬಿಟ್ಟದ್ದು ಕೇವಲ ಘಾಯಿದೆ ಪರ್ಯಾಲೋಚನೆಯಿಂದಲೇ ಅಲ್ಲಾ, ಇದಕ್ಕಿಂತ ವಿಶೇಷವಾದ ಕಾರಣಗಳುಂಟು; ಅವು ಯಾವವಂದರೆ:— ಸುತ್ತಮುತ್ತಲೂ ಹರ್ ಮ್ಯಾಜಸ್ಟೀಸ್ ಶೀಮೆಯಿಂದ ಆವೃತವಾಗಿರುವ ಈ ಮೈಸೂರು ದೇಶದಲ್ಲಿ ಆ ಹರ್ ಮ್ಯಾಜ ಸ್ಟೀಸ್ ಸೀಮೆಯಲ್ಲಿನ ಉತ್ತಮವಾದ ಪೋಸ್ಟಿನ ಏರ್ಪಾಡಿನಂತೆ ಜಾರಿಯಲ್ಲಿ ತರುವದು ಸಾವಕಾಶವಾದಷ್ಟೂ ವ್ಯಾಪಾ ರಸ್ಥರಿಗೆ ವಿಶೇಷನಾದ ಅನಾನುಕೂಲತೆ ಉಂಟಾಗುತ್ತಾ ಇತ್ತಲ್ಲದೆ, ಸಾಮಾನ್ಯವಾಗಿ ದೇಶದ ಅಭಿವೃದ್ಧಿಗೆ ಆಟಂಕ ವಾಗುತ್ತಾ ಯಿತ್ತು. ಈಚಿಗೆ ಈ ದೇಶದ ಎಲ್ಲಾಕಡೆಗಳಲ್ಲಿಯೂ ರೈಲ್ ರಸ್ತೆಗಳು ಮತ್ತು ಭಾಟೂಮಾರ್ಗಗಳು, ಅತಿ ಕ್ಷಿಪ್ರವಾಗಿ ತಯಾರಾಗುತ್ತಾ ಒರುವದರಿಂದಲೂ, ಮೈಸೂರು ದೇಶದ ನಿವಾಸಿಗಳಾದ ಜನರಿಗೂ ಹೊರಗೆ ಇಂಡಿಯಾ ದೇಶದಲ್ಲಿರತಕ್ಕವರಿಗೂ ವ್ಯಾಪಾರನಿಮಿತ್ತವಾದ ಸಂಬಂಧ ಹೆಚ್ಚುತ್ತಾ ಯಿರುವದ್ದರಿಂದಲೂ ಕಾಲಕ್ಕೆ ತಕ್ಕ ಗುಣವಾಗಿ ಆಗಬೇಕಾದ ಏರ್ಪಾಡುಗಳನ್ನು ಮಾಡತಕ್ಕದ್ದು ಮೈಸೂರು ಸರ್ಕಾರದ ಕರ್ತವ್ಯವಾಗಿದೆ. ಇದಕ್ಕೆ ದೃಷ್ಟಾಂತವಾಗಿ ಭಾಂಗಿಗೆಳನ್ನು ಇನ್ಷೂರ್ ಮಾಡಿಸಬೇಕಂತಲೂ, ಮನಿಆರ್ಡರ್, ಟೆಲಿಗ್ರಾಫ್ ಇವುಗಳನ್ನು ಸ್ಥಾಪಿ ಸಬೇಕೆಂತಲೂ, ಮತ್ತು ಹರ್ಮೇಜಸ್ಟಿನ್ ಶೀಮೆಯಲ್ಲಿರುವಂತೆ ಇತರ ಅಂಚೆ ಏರ್ಪಾಡುಗಳನ್ನು ಮಾಡಬೇಕೆಂತಲೂ ಅನೇಕರು ಕೇಳಿಕೊಳ್ಳುತ್ತಿದ್ದರು. ಈ ಏರ್ಪಾಡಿಗೆ ಎಲ್ಲಾ ದೇಶದಲ್ಲಿಯೂ ಬಂದೇರೀತಿಯಾದ ನಿಬಂಧನೆಯೂ ಮತ್ತು ಏಕಮುಖವಾದ ಆಡಳಿತವೂ ಅತ್ಯಾವಶ್ಯಕವೆಂದು ಸ್ಪಷ್ಟಪಟ್ಟಿದ್ದರಿಂದಲೂ, ಹರ್‌ಮೇಜಸ್ಟಿ ಪೋಸ್ಟಿನಲ್ಲಿ ಉಂಟಾಗಿರುವ ಎಲ್ಲಾ ಅನುಕೂಲಗಳನ್ನೂ ನಮ್ಮ ಅಂಚೆ ಇಲಾಖೆಯಲ್ಲಿಯೂ ಕಲ್ಪಿಸಿ ಈ ಇಲಾಖೆಯಿಂದಲೇ ಟಪ್ಪಾಲ್ ಕೆಲಸವು ಹರ್‌ಮೇಜಸ್ಟಿ ಪೋಸ್ಟ್ ಇಲಾಖೆಯವರೊಂದಿಗೆ ಹೊಂದಿಕೆಯಿಂದ ನಡೆಸುವದರಲ್ಲಿ ಆಟಂಕ ಉಂಟಾದ್ದರಿಂದಲೂ, ಏಕದೇಶಮಾತ್ರದಲ್ಲಿ ಇಷ್ಟುಮಟ್ಟಿಗೆ ಪರಿಷ್ಕರಿಸಲ್ಪಟ್ಟು ಪ್ರಜೆಗಳಿಗೆ ಪ್ರಯೋಜನಕರವಾಗು ವೆಂತ ಏರ್ಪಾಡುಮಾಡುವದು ಅಸಾಧ್ಯವಾದ್ದರಿಂದಲೂ ಶ್ರೀಮನ್ಮಹಾರಾಜಾ ಸರ್ಕಾರವರು ಈ ಶೀಮೆಯ ಅಂಚೆ ಯನ್ನು ಹರ್‌ಮೇಜಸ್ಟಿ ಪೋಸ್ಟ್ ಜಡನೆ ಸೇರಿಸತಕ್ಕದ್ದೆಂದು ತೀರ್ಮಾನಿಸಿದರು. ಮತ್ತು ಇದರಿಂದ ಜನಗಳಿಗೆ ಹೆಚ್ಚಾಗಿ ಅನುಕೂಲ ಉಂಟಾಗಬಹುದೆಂದು ನಂಬಿ ಇದ್ದಾರೆ.